





# ಹಸಿರು ಕುಟ್ರದ ಕಾರುಬಾರು



ಚಿತ್ರ––ಬರಹ :

**ಪ್ರಸಾದ್ ಶೆಣೈ ಆರ್.ಕೆ.**

ಆಂಗ್ಲಭಾಷೆಯಲ್ಲಿ ಇದರ ಹೆಸರು ಗ್ರೀನ್ ಬಾರ್ಬೆಟ್. ಕನ್ನಡದಲ್ಲಿ ಹಸಿರು ಕುಟ್ರ, ಕುಟಿಗ ಅಂತೆಲ್ಲಾ ಕರೆಯುತ್ತಾರೆ. ಮೈನಾ ಗಾತ್ರದ ಎಲೆ ಹಸಿರು ಬಣ್ಣದ ಈ ಹಕ್ಕಿಗಳಲ್ಲಿ ಹಲವು ವಿಧಗಳಿವೆ. ಇವುಗಳಲ್ಲಿ ಕೆಂಪು ಕತ್ತಿನ ಕಂಚುಕುಟಿಗ ( ಕ್ರಿಮ್ಸನ್ ಫ್ರಂಟೆಡ್ ಬಾರ್ಬೆಟ್), ಸಣ್ಣ ಹಸಿರುಕುಟ್ರ (ಸ್ಮಾಲ್ ಗ್ರೀನ್ ಬಾರ್ಬೆಟ್) ಮತ್ತು ಚೆಂಬುಕುಟಿಗ (ಕಾಪ್ಪರ್ ಸ್ಮಿತ್ ಬಾರ್ಬೆಟ್) ಕೆಲವು ವೈವಿಧ್ಯಗಳು.

ಸಾಮಾನ್ಯವಾಗಿ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಹಸಿರು ಕುಟ್ರ ಕಾಣಸಿಗುತ್ತದೆ. ನಾನು ನೋಡಿದ ಕುಟ್ರ ಹಕ್ಕಿಯ ಬಿಳಿ ಎದೆಯ ಮೇಲೆ ಕಂದು ಬಣ್ಣದ ಚಿತ್ರವಿಚಿತ್ರ ವಿನ್ಯಾಸಗಳಿದ್ದವು. ಕತ್ತಿನಲ್ಲಿ ಚಿತ್ತಾಕರ್ಷಕ ಕುಸರಿಯಿತ್ತು. ಆ ಹಕ್ಕಿ ದೂರದಿಂದ ನೋಡಿದರೆ ಗಿಳಿಯಂತೆಯೇ ಕಾಣುತ್ತಿತ್ತು. ಬೇಸಿಗೆಯಲ್ಲಿ ಕಾಡು ತೋಪುಗಳ ಬಳಿ ಹಣ್ಣು ತಿನ್ನುತ್ತಾ ಹೊಟ್ಟೆ ಹೊರೆದುಕೊಳ್ಳುತ್ತಿರುವ ಕುಟ್ರ ಹಕ್ಕಿಯನ್ನೂ ಇತ್ತೀಚೆಗೆ ನೋಡಿದ್ದರಿಂದ ಅವುಗಳ ಸಾಮಾನ್ಯ ಗುಣಗಳ ಬಗ್ಗೆಯೂ ತಿಳಿದು ಕೊಳ್ಳುವಂತಾಯಿತು.